ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.: 106/2016

ಪಿ. ಡಬ್ಲ್ಯು: 08

ಸಿ. ಡಬ್ಲ್ಯು: 12

| | | |
|---|---|---|
| ಸಾಕ್ಷಿದಾರರ ಹೆಸರು | : | ದೇವರಾಜು |
| ತಂದೆ/ಪತಿಯ ಹೆಸರು | : | ನಾಗರಾಜು |
| ವಯಸ್ಸು | : | 42 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಬೇವಿನಕುಪ್ಪೆ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ:

23.03.2022

ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ

ಸಾಕ್ಷಿಗೆ ಒಂದು ಮಹಜರ್ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6.ಬಿ. ಎಂದು ಗುರುತಿಸಲಾಯಿತು. ನಿಪಿ.6 ಕ್ಕೆ ನಾನು ಸಹಿಯನ್ನು ಪಾಂಡವಪುರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ.6 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ನಿಪಿ.6 ಕ್ಕೆ ನನ್ನ ಜೊತೆ ತಮ್ಮೇಗೌಡ ಎನ್ನುವವರು ಸಹ ಸಹಿ ಮಾಡಿರುತ್ತಾರೆ. ನಿಪಿ.6 ಕ್ಕೆ ನಾನು 5-6 ವರ್ಷಗಳ ಹಿಂದೆ ರಾತ್ರಿ 08.00 ಸಮಯದಲ್ಲಿ ಪಾಂಡವಪುರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ.6 ಮಾಡಿದಂತಹ ದಿನಾಂಕ, ತಿಂಗಳು ಹಾಗೂ ವರ್ಷ ನನಗೆ ನೆನಪಿಲ್ಲ. ನಿಪಿ.5 ರಲ್ಲಿ ತೋರಿಸಿರುವ ಸಿಲಿಂಡರ್ ಅನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>**

ದಿಃ 02.12.2015 ರಂದು ಆರೋಪಿತರು ವಾಸವಿದ್ದ ಬೆಂಗಳೂರಿನ ಪೀಣ್ಯ 2 ನೇ ಹಂತದ ಸಂಜೀವ ನಗರದಲ್ಲಿ ಆರೋಪಿಗಳು ತೋರಿಸಿದ ಜಾಗದಲ್ಲಿ ನನ್ನ ಮತ್ತು ತಮ್ಮೇಗೌಡ ರವರ ಸಮಕ್ಷಮ ಪೋಲೀಸರು ಸಂಜೆ 05.00-06.00 ವರೆಗೆ ಮಹಜರ್ ಕ್ರಮ ಜರುಗಿಸಿ ರೂಂ ನಲ್ಲಿ ಇಟ್ಟಿದ್ದ ಎರಡು ಸೋನಿ ಟಿವಿಗಳು ಹಾಗೂ ಒಂದು ಇಂಡೇನ್ ಸಿಲಿಂಡರ್ ಅನ್ನು ತಮ್ಮ ವಶಕ್ಕೆ ಪಡೆದಿದ್ದರೂ ಮತ್ತು ಆ ಸಮಯದಲ್ಲಿ ನಿಪಿ.6 ಅಮಾನತ್ತು ಮಹಜರ್ ಜರುಗಿಸಿದ್ದು ನಾನು ಮತ್ತು ತಮ್ಮೇಗೌಡ ನಿಪಿ.6 ಕ್ಕೆ ಸದರಿ ಸ್ಥಳದಲ್ಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನನ್ನ ಸಮಕ್ಷಮ ನಿಪಿ.6 ರಂತೆ ಅಮಾನತ್ತು ಮಹಜರ್ ಮಾಡಿ ಸೋನಿ ಟಿವಿಗಳು ಮತ್ತು ಸಿಲಿಂಡರ್ ಅನ್ನು ವಶಪಡಿಸಿಕೊಂಡಿದ್ದರೂ ಸಹಿತ ಯಾವುದೇ ಅಮಾನತ್ತು ಪಡಿಸಿಕೊಂಡಿಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ</u>**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.